ಪ್ರಬಂಧ

# ಪಾದುಕಾ ಪಟ್ಟಾಭಿಷೇಕ



**ನಿರ್ಮಲಾ ಶೆಟ್ಟರ್**

ಕಲೆ: ಸಂತೋಷ್ ಸಸಿಹಿತ್ಲು

'ಚಪ್ಪಲೀಲ್ ಹೊಡಿತೀನಿ' ಎನ್ನುವ ಈ ಮಾತು ಬಸ್ಸಿನಲ್ಲಿ ಕುಳಿತು ತಮ್ಮ ತಮ್ಮದೇ ಲೋಕದಲ್ಲಿ ವಿಹರಿಸುತ್ತಿರುವ, ನಿದ್ರಿಸುತ್ತಿರುವ ಎಲ್ಲರನ್ನು ಎಚ್ಚರಿಸಿತೋ ಇಲ್ಲವೋ, ನನ್ನನ್ನಂತೂ ಬಡಿದೆಬ್ಬಿಸಿತು. ಹೆಣ್ಣು ದನಿ ತುಸು ಜೋರಾಗಿಯೇ ಬಂದಿತ್ತು. ಕಾರಣ ಅಲ್ಲಿಯ ಸಹನೆಯ ಕಟ್ಟೆ ಒಡೆದಿತ್ತೆಂದು ಬೇರೆ ಹೇಳಬೇಕಿಲ್ಲ. ನನಗೆ ಗೊತ್ತಾಯಿತು ಏನು ನಡೆದಿರಬಹುದೆಂದು. ಸೀಟಿನಲ್ಲಿ ಬಾಜು ಕುಳಿತು ನಿದ್ದೆಯ ನಾಟಕವಾಡುವ ಆ ನಡುವಯಸ್ಸು ದಾಟುತ್ತಿರುವ ಗಂಡಸಿಗೆ, ಗಂಡುಜೀವಿ ಅನ್ನಬೇಕೊ, ಸಹೋದರ ಅನ್ನಬೇಕೊ, ಮನುಷ್ಯ ಅಷ್ಟೇ ಸಾಕೋ ಗೊತ್ತಾಗಲಿಲ್ಲ. ಲೋಹಿಯಾರವರ ಮಾತು ನೆನಪಾಯಿತು. 'ಒಂದು ವೇಳೆ ಈ ಹೆಣ್ಣು ಹುಟ್ಟದೇ ಇದ್ದಿದ್ದರೆ, ಈ ಗಂಡಸು ಇನ್ನೆಷ್ಟು ರಾಕ್ಷಸನಾಗಿರುತ್ತಿದ್ದ' ಎಂಬಂತೆ ರಾಕ್ಷಸ ಎನ್ನಬೇಕೋ ಎಂದು ಯೋಚಿಸುತ್ತಿಲಿದ್ದೆ. ಅಷ್ಟರಲ್ಲಾಗಲೇ ಆ ದನಿಗೆ ಆ ವ್ಯಕ್ತಿ ಸೀಟಿನಿಂದ ಸೀದಾ ಎದ್ದು ಬಸ್ಸಿನ ಬಾಗಿಲಿಗೆ ಬಂದು ನಿಂತಾಗಿತ್ತು. ಈವರೆಗೂ ಅಲ್ಲೇನೂ ನಡೆದಿಲ್ಲ ಎನ್ನುವಂತೆ ಪ್ರಯಾಣಿಕ ಮಹಾನುಭಾವರು ತುಸು ಅಲುಗಾಡಿ ಮತ್ತೆ ಮೊದಲಿನಂತೆ ತಮ್ಮ ತಮ್ಮ ಲೋಕಕ್ಕಿಳಿದರು. ಬಸ್ಸು ಮೊದಲಿನಂತೆ ಕುಲುಕಾಟ ನಡೆಸಿಯೇ ಇತ್ತು. ನನಗೆ ಇಲ್ಲಿ ಆ ಹೆಣ್ಣುಮಗಳ ಮಾತು ಕಿವಿಯಲ್ಲಿ ಉಳಿದು, ಎದೆಯಲ್ಲಿ ಇಳಿದು, ಕಾಲ್ಮರಿಗೆ ಕಡೆಗೆ ನಡೆಯಿತು.

ಜೋಡು, ಚಪ್ಲಿ, ಕಾಲ್ಮರಿ, ಎಕ್ಕಡ, ಕೆರ, ಪಾದರಕ್ಷೆ, ಪಾದುಕೆ, ಮೆಟ್ಟು ಹೀಗೆ ಕರೆಸಿಕೊಳ್ಳುವ ಈ ಚಪ್ಪಲ್ಲು ಒಂದೆಡೆ ಗೌರವದ, ಹಿರಿಮೆಯ, ಘನತೆಯ ಪ್ರತೀಕ ಎನ್ನುವುದಾದರೆ, ಮತ್ತೊಂದೆಡೆ ಅವಮಾನಿಸುವ, ಅಪಮಾನಿಸುವ ಸಾಧನವೂ ಆಗಿದೆ. ಚಪ್ಪಲಿಯಿಂದ ಹೊಡೆಯುವ ಮಾತೆಂಬುದು, ಎಲ್ಲ ಬೈಗುಳಗಳು ಮುಗಿದ ಮೇಲೆ, ಸಹನೆಯ ಕಟ್ಟೆಯೂ ಒಡೆದಾಗ, ಇನ್ನೇನು ಯಾವ ಪದವೂ ಎದುರಿಗಿನ ಪರಿಸ್ಥಿತಿಯನ್ನು ಬದಲಾಯಿಸಲು ಅಸಮರ್ಥ ಎನ್ನುವ ಘಳಿಗೆ ಎದುರಾದ ಸಂದರ್ಭಗಳು ಆವಾಗಾವಾಗ ಸೃಷ್ಟಿಯಲ್ಲಿ ಸೃಷ್ಟಿಯಾಗುತ್ತ ಇರುವಾಗ ಹೊರಬೀಳುತ್ತದೆ. ಚಪ್ಪಲಿಯಿಂದ ಹೊಡೆಯುವ ಪದಬಳಕೆ ಕಡೆಗೊಮ್ಮೆ ಗಮನ ಹರಿಸೋಣವಾದರೆ, ಬಳಸುವ ಪರಿಯ ಎರಡೂ ಮಗ್ಗಲುಗಳನ್ನು ನೋಡಲಾಗಿ ಒಂದು ಬದಿ ಮರ್ಯಾದೆಯನ್ನು ಉಳಿಸಿಕೊಳ್ಳಲು ಕಾಲಿಂದ ಕೈಗೆ ಬರುತ್ತದೆ. ಮತ್ತೊಂದು ಬದಿ ಎದುರಿರುವ ವ್ಯಕ್ತಿಯ ಮರ್ಯಾದೆ ಕಳೆಯುವ ಕಾರ್ಯವನ್ನು ತನ್ನೊಳಗೆ ಅಂತರ್ಗತ ಮಾಡಿಕೊಂಡೇ ಪದ ಬಾಯಿಯಿಂದ ಹೊರಬೀಳುತ್ತದೆ. ಅದಕ್ಕಲ್ಲವೇ ಆವಾಗಾವಾಗ ಪೇಪರ್ ಸುದ್ದಿ ಓದುತ್ತಿರುತ್ತೇವೆ. 'ಅಲ್ಲೊಂದು ಕಾರ್ಯಕ್ರಮದಲ್ಲಿ ವೇದಿಕೆಗೆ ಚಪ್ಪಲಿ ಒಗೆದರಂತೆ, ಒಗೆದವನನ್ನು ಪೋಲಿಸ್ ಹಿಡಿದೊಯ್ದರಂತೆ' ಎಂದು. ಹಿಡಿದೊಯ್ದರೋ ಬಿಟ್ಟರೋ ನಂತರದ ಕಥೆ ನನಗಂತೂ ಬೇಡ. ಆದರೆ, ಅದರ ಕುರಿತು ನಮ್ಮ ಚನ್ನವೀರ ಕಣವಿಯವರು ಎಷ್ಟು ಚಂದ ಕವಿತೆ ಬರದಾರಂದ್ರ:

'ಯಾಕ ಸುಳ್ಳುಳ್ಳ ಸುದ್ದಿ ಹಬ್ಬಸ್ತೀರಿ ಮೊನ್ನಿ ಸಭಾದಾಗ ಯಾರೂ ನನ್ನ ಕಡೆ ಚಪ್ಪಲಿ ತೂರಿಲ್ಲ...'